ನಾಮಕಾವಸ್ಥೆಗೆ ಎಫ್.ಐ.ಆರ್. ಹಾಕಿ, ಇಷ್ಟರವರೆಗೆ ಯಾರನ್ನೂ ಕೂಡ ಬಂಧಿಸುವಂಥ ಕಾರ್ಯಕ್ರಮ ಹಾಕಿಲ್ಲ. ಅದಕ್ಕೆ ಸಂಬಂಧಪಟ್ಟ ಫೋಟೋಗಳು ನನ್ನ ಹತ್ತಿರ ಇವೆ. ಈ ರೀತಿ ಮರ ಲೂಟಿ ಮಾಡಿದ್ದರೂ ಸಹ ರೆವಿನ್ಯೂ ಅಧಿಕಾರಿಗಳು ಕಣ್ಣುಮುಚ್ಚಿಕೊಂಡು ಕೂತಿರುವುದು ಬಹಳ ತಪ್ಪಾಗಿದೆ. ಇದಕ್ಕೆ ಸಂಬಂಧಪಟ್ಟ ಅರಣ್ಯಾಧಿಕಾರಿಗಳು ಮತ್ತು ಸಂಬಂಧಪಟ್ಟವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿ, ನನ್ನ ಹತ್ತಿರ ಇರುವ ಕೆಲವು ಮಾಹಿತಿಗಳನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಆರ್. ರೋಷನ್ ಬೇಗ್ :— ಮಾನ್ಯ ಅಧ್ಯಕ್ಷರೆ, ಅವರು ಹೇಳಿದ್ದನ್ನು ನಾನು ನೋಟ್ ಮಾಡಿಕೊಂಡಿದ್ದೇನೆ, ಸಂಬಂಧಪಟ್ಟ ಮಾನ್ಯ ಸಚಿವರು ಬಂದ ಮೇಲೆ ನಾವು ಈ ಬಗ್ಗೆ ಪರಿಶೀಲನೆ ಮಾಡುತ್ತೇನೆ.

MR. SPEAKER :— You must send a written reply to them.

(ii) ಮಹಾರಾಷ್ಟ್ರ ಗಡಿ ಭಾಗದಲ್ಲಿರುವ ಅಥಣಿ ತಾಲ್ಲೂಕಿನ ಕಾಗವಾಡ ಕ್ಷೇತ್ರದ ಹಳ್ಳಿಗಳಿಗೆ ಮೂಲಭೂತ ಸೌಕರ್ಯ ಒದಗಿಸುವುದು.

ಶ್ರೀ ಶಹಜಹಾನ್ ಇ. ಡೊಂಗರಗಾವ್ :— ಮಾನ್ಯ ಅಧ್ಯಕ್ಷರೆ, ಮಹಾರಾಷ್ಟ್ರ ಗಡಿಭಾಗದಲ್ಲಿರುವ ಅಥಣಿ ತಾಲ್ಲೂಕಿನ ಕಾಗವಾಡ ಮತಕ್ಷೇತ್ರದಲ್ಲಿ ಬರುವ ಆರು ಹಳ್ಳಿಗಳು ಮತ್ತು ಅಥಣಿ ಮತಕ್ಷೇತ್ರದಲ್ಲಿ ಬರುವ 22 ಹಳ್ಳಿಗಳ ಪರಿಸ್ಥಿತಿ ಬಹಳ ದಯನೀಯವಾಗಿದೆ. ಅಲ್ಲಿ ಮೂಲಭೂತ ಸೌಕರ್ಯಗಳು ಇಲ್ಲ, ಅವುಗಳನ್ನು ಮಹಾರಾಷ್ಟ್ರ ರಾಜ್ಯಕ್ಕೆ ಸೇರಿಸಿ, ಇಲ್ಲವೇ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಎಂದು ಕಳೆದ ಎಂಟು-ಹತ್ತು ದಿನಗಳಿಂದ ಅಲ್ಲಿರುವ ಜನರು ಒತ್ತಾಯ ಮಾಡುತ್ತಿದ್ದಾರೆ. ಆ ಭಾಗದಲ್ಲಿ ಈಗಾಗಲೇ ನಮ್ಮ ಜಿಲ್ಲಾ ಮಂತ್ರಿಗಳು, ಬೆಳಗಾಂ ಭಾಗದ ಲೋಕಸಭಾ ಸದಸ್ಯರು ಹಾಗೂ ಆ ಗಡಿ ಭಾಗದ ಮುಖಂಡರು ಬಂದು ಮಾನ್ಯ ಮುಖ್ಯಮಂತ್ರಿಗಳನ್ನು ಕಂಡಿದ್ದಾರೆ. ಈಗಾಗಲೇ ಜಿಲ್ಲಾಧಿಕಾರಿಗಳು ಈ ವಿಷಯಕ್ಕೆ ಸಂಬಂಧಪಟ್ಟಂತೆ 6.4.2000ರಂದು ಒಂದು ವಿಶೇಷ ಸಭೆ ಕರೆದು ವಿಚಾರಮಾಡಿ ಅಲ್ಲಿ ಅವಶ್ಯಕವಾಗಿ ಆಗಬೇಕಾದ ಕಾಮಗಾರಿಗಳ ಬಗ್ಗೆ ಸರ್ಕಾರಕ್ಕೆ ಒಂದು ವರದಿ ಸಲ್ಲಿಸಿದ್ದಾರೆ. ಅದಲ್ಲದೆ 26.4.2000 ರಂದೂ ಸಹ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಒಂದು ವಿಶೇಷ ಸಭೆ ಕರೆದು ಆ ಭಾಗದಲ್ಲಿ ಅವಶ್ಯಕವಾಗಿ ಆಗಬೇಕಾಗಿರುವ ಕಾರ್ಯಗಳ ಕುರಿತು ಸಮಾಲೋಚನೆ ಮಾಡಿದ್ದಾರೆ. ನಾನು ತಮ್ಮ ಮೂಲಕ ಸರ್ಕಾರಕ್ಕೆ ಈ ಭಾಗದ ಜನರ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯ ಮಾಡುತ್ತಿದ್ದೇನೆ; ಕಾಗವಾಡ ಉಪ ಚುನಾವಣೆಯಲ್ಲಿ ಬಂದಂತಹ ಎಲ್ಲ ಮುಖಂಡರು ಆ ಭಾಗದ ಪರಿಸ್ಥಿತಿಯನ್ನು ಕಣ್ಣಾರೆ ಕಂಡಿದ್ದಾರೆ. ಸನ್ಮಾನ್ಯ ಪಿ.ಜಿ.ಆರ್. ಸಿಂಧ್ಯರವರು ತಮ್ಮ ಭಾಷಣದಲ್ಲಿ ಈ ಕುರಿತು ಹೇಳಿದ್ದರು. ಆ ಭಾಗದಲ್ಲಿ ಸರಿಯಾದ

ರಸ್ತೆಗಳಿಲ್ಲ, 12 ಗ್ರಾಮಗಳಿಗೆ ಬಸ್ ಹೋಗುವುದಿಲ್ಲ. ಚನ್ನಕೇರಿ, ಬ್ಯಾಡಹಟ್ಟಿ, ಸಿದ್ದೇವಾಡಿ, ಕೃಷ್ಣೇವಾಡಿ, ಬೋಮ್ಮನಾಳ್, ಕೋತ್ತಿವಾಡಿ, ಕಲೂತಿ, ನಿಸ್ಕರದಟ್ಟಿ, ಚಕ್ಕರದಟ್ಟಿ, ಮುಂತಾದ 12 ಗ್ರಾಮಗಳಿಗೆ ರಸ್ತೆಗಳು ಇಲ್ಲದೆ ಇರುವುದರಿಂದ ಬಸ್ ಹೋಗುವುದಿಲ್ಲ. ಮಹಾರಾಷ್ಟ್ರ ಗಡಿಭಾಗದಲ್ಲಿ ಕೆಲವೊಂದು ಕಡೆ ಕೇವಲ ಐದನೇ ತರಗತಿಯವರೆಗೆ ಮಾತ್ರ ಪ್ರಾಥಮಿಕ ಶಾಲೆಗಳಿವೆ, ಪೂರ್ಣ ಪ್ರಮಾಣದಲ್ಲಿ ಪ್ರಾಥಮಿಕ ಶಾಲೆಗಳಿಲ್ಲ. ಆ ಭಾಗದ ಜನರು ತಮ್ಮ ಮಕ್ಕಳು ಮಾಧ್ಯಮಿಕ ಶಾಲಾ ಶಿಕ್ಷಣ ಹೊಂದಲು ಮಹಾರಾಷ್ಟ್ರದಲ್ಲಿರುವ ಶಾಲೆಗಳನ್ನೇ ಅವಲಂಬಿಸಿರುವ ದುಸ್ಥಿತಿ ಒದಗಿ ಬಂದಿದೆ. ಆ ಭಾಗದ ವಿದ್ಯಾರ್ಥಿಗಳು ಇವತ್ತು ಉಚ್ಚ ಶಿಕ್ಷಣಕ್ಕಾಗಿ ಮಹಾರಾಷ್ಟ್ರಕ್ಕೆ ಹೋದಾಗ ಮಹಾರಾಷ್ಟ್ರದವರು, ನೀವು ಕರ್ನಾಟಕದವರು ನಿಮಗೆ ನಾವು ಯಾವುದೇ ಸವಲತ್ತುಗಳನ್ನ ಕೊಡುವುದಕ್ಕಾಗುವುದಿಲ್ಲ, ಎಂದು ಹೇಳುತ್ತಾರೆ. ಅವರು ಮರಾಠಿಯಲ್ಲಿ ಆ ಭಾಗದ ಜನರು ಕಲಿತಿರುವುದರಿಂದ ನಮ್ಮ ಕರ್ನಾಟಕದಲ್ಲಿ ಅವರಿಗೆ ಯಾವುದೇ ನೌಕರಿಯ ಸವಲತ್ತುಗಳನ್ನು ಕೊಡಲು ಅಸಾಧ್ಯವಾಗಿರುವ ಪರಿಸ್ಥಿತಿ ಅಲ್ಲಿಯ ವಿದ್ಯಾರ್ಥಿಗಳಿಗಿದೆ. ಅಲ್ಲಿ ಪಶು ಚಿಕಿತ್ಸಾ ಕೇಂದ್ರಗಳಲ್ಲಿ, ಆರೋಗ್ಯ ಕೇಂದ್ರಗಳೂ ಇಲ್ಲ. ಅಲ್ಲಿ ಮುಖ್ಯವಾಗಿ ಎಲ್ಲ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕೆಂದು ಎಲ್ಲ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದೆ. ಇದು ನಮ್ಮ ರಾಜ್ಯ ಸರ್ಕಾರಕ್ಕೆ ಅವಮಾನವಾಗುವ ವಿಷಯ. ಇಂಡಿಯನ್ ಎಕ್ಸ್‌ಪ್ರೆಸ್, ಸಂಯುಕ್ತ ಕರ್ನಾಟಕ, ಪ್ರಜಾವಾಣಿ ಹಾಗೂ ವಿಜಯ ಕರ್ನಾಟಕ ಈ ಎಲ್ಲಾ ಪತ್ರಿಕೆಗಳಲ್ಲಿ ಕನ್ನಡ ರಾಜ್ಯೋತ್ಸವ ದಿನದಂದು ವಿವರವಾದ ಲೇಖನ ಬಂದಿತ್ತು. ಅಲ್ಲಿ ಬಸ್ ವ್ಯವಸ್ಥೆ ಆಗಬೇಕು, ಶೈಕ್ಷಣಿಕ ವ್ಯವಸ್ಥೆಗಾಗಿ ಮಾಧ್ಯಮಿಕ ಶಾಲೆಗಳಾಗಬೇಕು. ತೊಗಟನೂರುಗ್ರಾಮದಲ್ಲಿ ಒಂದು ಜೂನಿಯರ್ ಕಾಲೇಜು ಆಗಬೇಕು. ಚಿಕ್ಕ ನೀರಾವರಿಯಲ್ಲಿ ಬರತಕ್ಕಂಥ ವಿಷ್ಣುವಾಡಿ, ಬಳೊಳ್ಳಗೆರೆ, ಅನಂತಪುರ ಗ್ರಾಮಗಳಲ್ಲಿ ಕೆರೆ ನಿರ್ಮಾಣವಾಗಬೇಕು. ಬಳ್ಳಿಗೆರೆ ಗ್ರಾಮದಲ್ಲಿ ಒಂದು ಪ್ರಾಥಮಿಕ ಕೇಂದ್ರವಾಗಬೇಕು. ಇನ್ನಿತರ ಸ್ಥಳಗಳಲ್ಲಿ ರಸ್ತೆ ನಿರ್ಮಾಣವಾಗಬೇಕೆಂದು ಸರ್ಕಾರದವರಲ್ಲಿ ನಾನು ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(iii) ಮಾನ್ಯ ಶಾಸಕರುಗಳಿಗೆ ಗಣಕಯಂತ್ರ ನೀಡುವುದರ ಬಗ್ಗೆ.

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) :— ಮಾನ್ಯ ಅಧ್ಯಕ್ಷರೆ, ಶಾಸಕರಿಗೆ ಗಣಕಯಂತ್ರ ಕೊಡುತ್ತೇವೆಂದು ಹೇಳಿ ಆ ಬಗ್ಗೆ ಟ್ರೈನಿಂಗ್ ಕೂಡ ಕೊಟ್ಟಿರಿ, ನಾವು ಎಲ್ಲರೂ ಟ್ರೈನಿಂಗ್ ಪಡೆದವು. ಇವತ್ತು ಒಂದು ಕಂಡಿಷನ್ ಹೇಳಿದ್ದೀರಿ, ಇದರಲ್ಲಿ ಕೆಲವೊಂದು ಒಪ್ಪಿಕೊಳ್ಳೋಣ, ನಾಲ್ಕು ವರ್ಷಗಳ ನಂತರ ಅದನ್ನು ವಾಪಸ್ ಕೊಡಬೇಕು ಎಂದು ತಾವು ಹೇಳುತ್ತೀರಿ, ಅದನ್ನು ಕೊಡೋಣ ಆದರೆ ನಾಲ್ಕು ವರ್ಷಗಳ ನಂತರ ನಾವು ವಾಪಸ್ ಕೊಡುವ ಗಣಕಯಂತ್ರದ ಕಂಡಿಷನ್ ಹೇಗಿರುತ್ತದೆ?